## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಪಳವಳ್ಳಿ ಗ್ರಾಮ ಪಂಚಾಯಿತಿ, ಕೆಂಚಗಾನಹಳ್ಳಿ ಗ್ರಾಮದಲ್ಲಿ ಪ್ರಾಯೋಗಿಕ ಮಾದರಿಯಲ್ಲಿ (Pilot) ನಿರ್ಮಿಸಲಾದ Sky Water Plantಗೆ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವ ಕುರಿತು

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 110 ಗ್ರಾನೀಸ(5)2011, ದಿನಾಂಕ 27.03.2012
2. ಮುಖ್ಯ ಇಂಜಿನಿಯರ್, ಪಿಆರ್ಇಡಿ ರವರ ಪತ್ರ ಸಂ: ಮುಇಂ/ಪಂರಾಇಂಇ/ತ್ವಗ್ರಾನೀಪ-1/ತಾಂಸ-1/ಕಿಇಂ-4/2013-14 ದಿನಾಂಕ 26.11.2013.

**ಪ್ರಸ್ತಾವನೆ :**

ಮೇಲೆ(1)ರಲ್ಲಿ ಓದಲಾದ ಆದೇಶದನ್ವಯ ತೀವ್ರ ಕುಡಿಯುವ ನೀರಿನ ತೊಂದರೆಯಿರುವ/ಗುಣಮಟ್ಟದ ಬಾಧೆಗೊಳಗಾಗಿರುವ ಕೋಲಾರ ಜಿಲ್ಲೆಯ ಗುಲ್ಲಕುಂಟೆ ಹಾಗೂ ತುಮಕೂರು ಜಿಲ್ಲೆಯ ಕೆಂಚಗಾನಹಳ್ಳಿಯಲ್ಲಿ ಪೈಲಟ್ ಮಾದರಿಯಲ್ಲಿ M/s Sky Water India Pvt Ltd., Hyderabad, Andra Pradesh ಈ ಸಂಸ್ಥೆಯವತಿಯಿಂದ Sky Water Plants ಅಳವಡಿಸಲು ಅನುಮತಿ ನೀಡಲಾಗಿದೆ. ಇದರನ್ವಯ ಮೇಲೆ(2) ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಪಳವಳ್ಳಿ ಗ್ರಾಮ ಪಂಚಾಯಿತಿ, ಕೆಂಚಗಾನಹಳ್ಳಿ ಗ್ರಾಮದಲ್ಲಿ ಪ್ರಾಯೋಗಿಕ ಮಾದರಿಯಲ್ಲಿ (Pilot) ನಿರ್ಮಿಸಲಾದ Sky Water Plant ಗೆ ಮೊದಲನೇ ಕಂತಿನ ಅನುದಾನ ರೂ.5,66,294/-ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಇದರನ್ವಯ NRDWP – SA ಘಟಕದ R&D ಬಾಬ್ತಿನಡಿ, ಉದ್ದೇಶಿತ ಸಂಸ್ಥೆಗೆ ಮೊದಲನೇ ಕಂತಿನ ಅನುದಾನ ರೂ.5,66,294/-ಗಳನ್ನು ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 110 ಗ್ರಾನೀಸ(5)2011, ಬೆಂಗಳೂರು ದಿನಾಂಕ 03.12.2013**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ತುಮಕೂರು ಜಿಲ್ಲೆಯ ಕೆಂಚಗಾನಹಳ್ಳಿಯಲ್ಲಿ Sky Water Plantನ್ನು ಅಳವಡಿಸಿದ ಬಾಬ್ತು M/s Sky Water India Pvt Ltd., Hyderabad, Andra Pradesh ಈ ಸಂಸ್ಥೆಗೆ ಮೊದಲನೇ ಕಂತಿನ ಅನುದಾನ ರೂ. 5,66,294/-(ಐದು ಲಕ್ಷದ ಅರವತ್ತಾರು ಸಾವಿರದ ಇನ್ನೂರ ತೊಂಬತ್ನಾಲ್ಕು ರೂಪಾಯಿ ಮಾತ್ರ)ಗಳನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಕೇಂದ್ರ ಪುರಸ್ಕೃತ NRDWP – SA ಘಟಕದ R&D ಬಾಬ್ತಿನಡಿ ಸದರಿ ಸಂಸ್ಥೆಗೆ ಕರಾರು ಪತ್ರದನ್ವಯ ಪಾವತಿಸಲು ಆದೇಶಿಸಲು ಸರ್ಕಾರವು ಹರ್ಷಿಸುತ್ತದೆ.

2. ಸದರಿ ಅನುದಾನವನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಕಚೇರಿಯ ವ್ಯಾಪ್ತಿಯಲ್ಲಿರುವ ಕಾರ್ಪೋರೇಷನ್ ಬ್ಯಾಂಕ್, ಎಸ್.ಸಿ.ರಸ್ತೆ, **SB ಖಾತೆ ಸಂಖ್ಯೆ : 037955**ರಿಂದ ಪಾವತಿಸಲು ಕ್ರಮವಹಿಸತಕ್ಕದ್ದು.

3. ಸದರಿ ಅನುದಾನವನ್ನು ವಿನಿಯೋಗಿಸಿದ ಕುರಿತು ಆರ್ಥಿಕ ಮತ್ತು ಭೌತಿಕ ಪ್ರಗತಿಗಳನ್ನು CE/PRED ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ತುಮಕೂರು ರವರು IMISರಡಿ ದಾಖಲಿಸತಕ್ಕದ್ದು. ಸದರಿ ಸಂಸ್ಥೆಯೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ವಯ ಸದರಿ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ವ್ಯವಸ್ಥೆ ನೋಡಿಕೊಳ್ಳಬೇಕು ಹಾಗೂ ಅದರ ಸದುಪಯೋಗ ಮತ್ತು ಬಳಕೆ ಕುರಿತಂತೆ ವರದಿಯನ್ನು ಸ್ಥಳೀಯ ಗ್ರಾಮ ಪಂಚಾಯಿತಿಯು PRED ಮುಖೇನ ಸರ್ಕಾರಕ್ಕೆ ನೀಡಬೇಕು.

2

4. ಈ ಆದೇಶವನ್ನು 2013-14ರ ಸಾಲಿಗೆ ಮುಂದುವರಿದ ಮತ್ತು ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳ ಅನುಷ್ಠಾನ ಸಲುವಾಗಿ ಯೋಜನೆಗಳನ್ನು ಮುಂದುವರಿಸಲು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು ನೀಡಿರುವ ಸಹಮತಿ ಸಂಖ್ಯೆ : ಗ್ರಾಅಪ 241 ಎಎಫ್ಎನ್ 2013 ದಿನಾಂಕ 01.08.2013ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಾಮಕೃಷ್ಣ)
ಸರ್ಕಾರದ ಉಪಕಾರ್ಯದರ್ಶಿ(ಗ್ರಾನೀಸ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ದೂ:080-2203 2806, ಫ್ಯಾಕ್ಸ್ 2220 3175
ಇ-ಮೇಲ್ rk3452000@gmail.com

ಗೆ:

1. ಮಹಾಲೇಖಪಾಲರು(ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ ಆನಂದರಾವ್ ವೃತ್ತ ಬೆಂಗಳೂರು-09
4. ಅಧೀಕ್ಷಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವೃತ್ತ ಕಚೇರಿ, ಬೆಂಗಳೂರು.
5. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು
6. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು
7. ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಅವೆನ್ಯೂ ರಸ್ತೆ, ಬೆಂಗಳೂರು
8. ವ್ಯವಸ್ಥಾಪಕರು, ಕಾರ್ಪೋರೇಷನ್ ಬ್ಯಾಂಕ್, ಎಸ್.ಸಿ.ರಸ್ತೆ, ಗಾಂಧಿ ನಗರ, ಬೆಂಗಳೂರು.
9. M/s Sky Water India Pvt Ltd.,Servey No. 795, Jodi metla cross, Warangal Road Ghatkesar Mandal Rangareddy District ,Hyderabad, Andra Pradesh.
10. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ, "ಕರ್ನಾಟಕ ವಿಕಾಸ" ಗ್ರಾಅಪಂರಾಜ್ ಇಲಾಖೆ
11. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂರಾ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು)
12. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ)
13. ವಿಶೇಷಾಧಿಕಾರಿ, ಗಣಕ ಕೋಶ, ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
14. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ

ಪ್ರತಿ:

1. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಇಲಾಖೆಯ ಎಲ್ಲಾ ನಿರ್ದೇಶಕರು/ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.
6. ನಿರ್ದೇಶಕರು(SWSM) ಹಾಗೂ ಸರ್ಕಾರದ ಅಪರ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.